C.C. ನಂಬರಃ 292/2020

ಪಿ. ಡಬ್ಲ್ಯೂಃ 6

ದಿಃ 15-04-2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟಿ ಸವಾಲುಃ ಆರೋಪಿ ಪರ ಶ್ರೀ ಎನ್.ಆರ್.ಎನ್. ವಕೀಲರಿಂದಃ

ಆರೋಪಿ ನೇಮಕವಾದ ವರ್ಷ ದಾಖಲಾತಿ ನೋಡದೇ ಹೇಳಲು ಬರುವುದಿಲ್ಲ. ದಿಃ 22-08-2016 ರಂದು ಆರೋಪಿ ನೌಕರಿಗೆ ಸೇರಿದ್ದ ಎಂದರೆ ಸರಿ. ಆರೋಪಿ ನೇಮಕವಾದ ಸಮಯದಲ್ಲಿ ಒಟ್ಟು 74 ಜನ ಆಯ್ಕೆಯಾಗಿದ್ದು, ಅದರಲ್ಲಿ ಆರೋಪಿ ಪ್ರಥಮ ಸ್ಥಾನದಲ್ಲಿದ್ದ ಎಂದರೆ ಸರಿ. ಆರೋಪಿ ವಾಹನ ಯಾವ ರೀತಿ ನಡೆಸುತ್ತಾನೆ ಎಂಬುವುದರ ಕುರಿತು ಪರೀಕ್ಷೆ ನಡೆಸಲಾಗುತ್ತದೆ ಎಂದರೆ ಸರಿ. ಆರೋಪಿ 25 ಅಂಕಗಳಿರುವ ಎರಡು ಪೇಪರಗಳಿಗೆ 21.5 ಹಾಗೂ 24 ಅಂಕ ಪಡೆದಿರುತ್ತಾನೆ ಎಂದರೆ ಸರಿ. ನಿಖರವಾಗಿ ವಾಹನ ಚಲಿಸುವ ವ್ಯಕ್ತಿ ಮಾತ್ರ ಆರೋಪಿ ಪಡೆದ ಅಂಕೆಗಳಷ್ಟು ಪಡೆಯುತ್ತಾರೆಂದರೆ ಸರಿ.

ಲಾಗ್ ಶೀಟ್ ನಲ್ಲಿ ವಾಹನದ ಯಾಂತ್ರಿಕ ದೋಷದ ಕುರಿತು ಚಾಲಕ ನಮೂದಿಸಿದ್ದರೆ ಅದನ್ನು ತಕ್ಷಣ ಸರಿಪಡಿಸಬೇಕಾಗುತ್ತದೆ ಎಂದರೆ ಸರಿ. ಈಗ ನೋಡುತ್ತಿರುವ ಲಾಗ್ ಶೀಟ ನಮ್ಮ ಇಲಾಖೆಯದ್ದು ಎಂದರೆ ಸರಿ. ಸದರಿ ದಾಖಲೆಯನ್ನು ನಿಡಿ-1 ಎಂದು ಗುರುತಿಸಲಾಯಿತು. ಸದರಿ ನಿಡಿ-1 ರಲ್ಲಿ ಗಾಡಿಗೆ

ಬ್ರೇಕ್ ತಾಗುವುದಿಲ್ಲವೆಂದು ನಮೂದಿಸಿದೆ ಎಂದರೆ ಸರಿ. ಕೆಎ–42/ಎಫ್–1342 ಘಟನೆ ನಡೆದಿದೆ ಎನ್ನುವ ಸಮಯದಲ್ಲಿ ಯಾವ ರೂಟಿಗೆ ಹೋಗಿ ಬರುತ್ತಿತ್ತು ಎಂದರೆ ಮಾಹಿತಿ ಇಲ್ಲ. ಬಸ್ಸು ಯಾವ ರೂಟಿಗೆ ಹೋಗಬೇಕೆಂದು ನಿಗಧಿಪಡಿಸುವ ವ್ಯಾಪ್ತಿ ನಮ್ಮ ವಿಭಾಗಕ್ಕಿದೆ ಎಂದರೆ ಸರಿ.

ಬಸ್ಸಿನ ಬ್ರೇಕ್ ಎರ್ ಬ್ರೇಕ್ ಸಿಸ್ಟಮ್ ನಿಂದ ಕೂಡಿದೆ. ಬಸ್ಸಿನ ಏರಬ್ರೇಕಿಗೆ ಸಂಬಂಧಿಸಿದಂತೆ ಗಾಳಿಯನ್ನು ತುಂಬಿಸಬೇಕಾಗುತ್ತದೆ ಎಂದರೆ ಸರಿ. ನಿಗಧಿಪಡಿಸಿದ ಗಾಳಿ ಏರ ಬ್ರೇಕ ಹಿಡಿಯದಿದ್ದರೆ ಬಸ್ಸಿನ ಚಾಲನೆ ಸಮಯದಲ್ಲಿ ಸರಿಯಾದ ಬ್ರೇಕ್ ಹಾಕಲು ಆಗುವುದಿಲ್ಲ. ಬ್ರೇಕ್ ಸರಿಯಾಗಿ ತಾಗದಿದ್ದರೆ ವಾಹನವನ್ನು ಗೇರ್ ಮೇಲೆ ಕಂಟ್ರೋಲ್ ಮಾಡಬೇಕಾಗುತ್ತದೆ ಎಂದರೆ ಸರಿ. ಗೇರ್ ಮೇಲೆ ವಾಹನ ಕಂಟ್ರೋಲ್ ಮಾಡಲು ಪ್ರಯತ್ನಿಸಿದರೆ ಅದರ ಮೈಲೇಜ ನಿಗಧಿತ ಪ್ರಮಾಣದಲ್ಲಿ ಇರುವುದಿಲ್ಲ ಎಂದರೆ ಸರಿ. ಕೆಎ–42/ಎಫ್1342 ಇದು ಬೆಂಗಳೂರು ರೂಟಿಗೆ ನೇಮಿಸಲಾಗಿತ್ತು ಎಂದರೆ ಸದರಿ ಬಸ್ಸಿನ ನಂಬರ ಬೆಂಗಳೂರು ರೂಟಿಗೆ ಹಾಕಿರುವುದಿಲ್ಲ ಎಂದು ಹೇಳುತ್ತಾರೆ. ಸದರಿ ಬಸ್ಸಿನ ಎಸ್.ಕೆ.ಎಮ್. ಶಾಪ ದಾವಣಗೆರೆ ಬಳಿ ಕಟ್ಟಾದಾಗ ಆರೋಪಿ ಖುದ್ದಾಗಿ ಅದನ್ನು ಬದಲಾಯಿಸಿಕೊಂಡು ಬಂದಿದ್ದ, ಪ್ರಯಾಣಿಕರಿಗೆ ತೊಂದರೆ ಆದ ಬಗ್ಗೆ ಅವರೂ ಸಹ ಡಿಪೋಗೆ ವರದಿ ಮಾಡಿದ್ದರು ಎಂದರೆ ಸರಿಯಲ್ಲ. ಸದರಿ ವಿಷಯವನ್ನು ನನಗೆ ಮತ್ತು ಚಾಸಾ–7 ರವರಿಗೆ ಆರೋಪಿ ತಿಳಿಸಿದ್ದ ಎಂದರೆ ಸರಿಯಲ್ಲ. ಸದರಿ ಬಸ್ಸನ್ನು ತನಗೆ ನೀಡದಂತೆ ವಿನಂತಿ ಪತ್ರವನ್ನೂ ಸಹ ಆರೋಪಿ ನಮಗೆ ನೀಡಿದ್ದ ಎಂದರೆ ಸರಿಯಲ್ಲ.

ಸುರೇಶ ನಾಯ್ಕ, ಪಿ.ಎಚ್.ನಾಯ್ಕ ಹಾಗೂ ಎ.ಡಿ. ನಾಯ್ಕ ರವರ ಪರಿಚಯ ಇದೆ. ಸದರಿಯವರು ಯೂನಿಯನ್ ಮುಖ್ಯಸ್ಥರು ಎಂದರೆ ಸರಿ. ಚಾಲಕರಿಗೆ ಮತ್ತು ಸಿಬ್ಬಂದಿಗೆ ತೊಂದರೆಯಾದಲ್ಲಿ ಆ ಕುರಿತು ಮೇಲಾಧಿಕಾರಿಯವರೊಂದಿಗೆ ಮಾತನಾಡಿ ಯೂನಿಯನ್ ಮುಖ್ಯಸ್ಥರು ವ್ಯಾಜ್ಯ ಬಗೆಹರಿಸುತ್ತಾರೆಂದರೆ ಸರಿ. ಪೊಲೀಸರಿಗೆ ಹೇಳಿಕೆ ನೀಡಿದ ದಿನಾಂಕ 12-08-2018 ರ ಸಾಯಂಕಾಲ ಆಗಿರುತ್ತದೆ. ಹೇಳಿಕೆಯನ್ನು ಪೊಲೀಸರು ಬರೆದುಕೊಂಡಿರುತ್ತಾರೆ. ಹೇಳಿಕೆಯನ್ನು ಪೊಲೀಸ್ ಸಿಬ್ಬಂದಿ ಬರೆದಿರುತ್ತಾರೆ. ಆ ಸಮಯದಲ್ಲಿ ಇಬ್ಬರು ಪೊಲೀಸರು ಬಂದಿದ್ದರು. ನಾನು ಹೇಳಿಕೆ ನೀಡಿದಾಗ ಸಹಿ ಪಡೆದಿರುತ್ತಾರೆ. ಹೇಳಿಕೆಯನ್ನು ಅರ್ಧ ಗಂಟೆಯವರೆಗೆ ಬರೆದಿರುತ್ತಾರೆ. ಹೇಳಿಕೆಯನ್ನು ಬರೆಯುವಾಗ ನನ್ನ ಬಳಿ ವಿಚಾರಿಸಿರುತ್ತಾರೆ. ಹೇಳಿಕೆಯನ್ನು ಹೀಗೆಯೇ ಬರೆಯಬೇಕೆಂದು ನಾನು ಹೇಳಿ ಬರೆಸಿಲ್ಲ.

ಪಂಚನಾಮೆ ಮಾಡಿದ ಸ್ಥಳ ನನ್ನ ವಿಭಾಗದ ಕಚೇರಿಯಿಂದ ಅಂದಾಜು 15 ಮೀ ದೂರದಲ್ಲಿದೆ. ನನ್ನ ವಿಭಾಗದಿಂದ ಚಾಸಾ-7 ರವರ ವಿಭಾಗ ಅಂದಾಜು 15 ಮೀ ದೂರದಲ್ಲಿದೆ. ನನ್ನ ಕೆಲಸದ ವಿಭಾಗದ ಸ್ಥಳದಲ್ಲಿ ವಾಹನದ ದುರಸ್ಥಿ ಕೆಲಸ ಮಾಡಲಾಗುತ್ತದೆ. ಒಂದು ಪಾಳಿಗೆ ಅಂದಾಜು ನಮ್ಮ ವಿಭಾಗದಲ್ಲಿ 12 ರಿಂದ 15 ಜನ ಕೆಲಸ ಮಾಡುತ್ತಾರೆ. ಆರೋಪಿ ತನಗೆ ಬೈದಿರುತ್ತಾನೆ ಎಂದು ತಿಳಿಸಿದ ಅವಧಿಯಲ್ಲಿ ಸ್ಥಳದಲ್ಲಿ ಯಾರ್ಯಾರಿದ್ದರು ಎಂದು ಪೊಲೀಸರಿಗೆ ಹೇಳಿ ಬರೆಸಿದ್ದೇನೆ. ಆರೋಪಿ ಗಲಾಟೆ ಮಾಡುತ್ತಿದ್ದಾನೆ, ಆತನನ್ನು ತಡೆಯಬೇಕೆಂದು ಭದ್ರತಾ ಸಿಬ್ಬಂದಿಗೆ ತಿಳಿಸಿಲ್ಲ, ಆದರೆ ಬಾಯಿ ಸಪ್ಪಳ ಕೇಳಿ ಅಲ್ಲಿಗೆ ಬಂದಿದ್ದರು. ಭದ್ರತಾ ಸಿಬ್ಬಂದಿ ಸ್ಥಳಕ್ಕೆ ಬಂದಾಗ ಬೆಳಿಗ್ಗೆ

9.30 ಗಂಟೆ ಆಗಿತ್ತು. ಆ ಸಮಯದಲ್ಲಿ ಫೋನ್ ಕರೆ ಮೂಲಕ ಪೊಲೀಸರಿಗೆ ತಿಳಿಸಲು ಪ್ರಯತ್ನಿಸಿಲ್ಲ. ಭದ್ರತಾ ಸಿಬ್ಬಂದಿಯು ದುರ್ವತನೆ ತೋರುವ ನೌಕರರನ್ನು ತಡೆ ಹಿಡಿಯಬಹುದು ಎಂದರೆ ಸರಿ. ನಮ್ಮ ಕೊಠಡಿಯ ಪಶ್ಚಿಮ ದಿಕ್ಕಿಗೆ ಭದ್ರತಾ ಸಿಬ್ಬಂದಿ ಇರುತ್ತಾರೆ.

ಘಟನೆ ನಡೆದಿದೆ ಎನ್ನುವ ದಿವಸ ನಾನು ಸಹ ಏನು ನಡೆದಿದೆಯೆಂದು ಚಾಸಾ-1 ರವರಿಗೆ ಲಿಖಿತವಾಗಿ ಬರೆದು ನೀಡಿದ್ದೆ. ಸದರಿ ಹೇಳಿಕೆಯನ್ನು ಬರೆದುಕೊಟ್ಟಾಗ ಮಧ್ಯಾಹ್ನ 2.30 ರಿಂದ 3.00 ಗಂಟೆ ಆಗಿರಬಹುದು. ಚಾಸಾ-7 ರವರೂ ಸಹ ಘಟನೆ ಕುರಿತಾಗಿ ವಿಷಯವನ್ನು ಬೆಳಿಗ್ಗೆ 9.45 ಗಂಟೆಗೆ ತಿಳಿಸಿದ್ದ. ಚಾಸಾ-7 ರವರು ಘಟನೆ ಕುರಿತು ಬರೆದುಕೊಟ್ಟ ಬಗ್ಗೆ ಮಾಹಿತಿ ಇಲ್ಲ. ನೌಕರಿಯಲ್ಲಿದ್ದಾಗ ತೊಂದರೆಯಾದರೆ ಪ್ರಕರಣ ದಾಖಲಿಸುವ ಸಾಮಾನ್ಯ ತಿಳುವಳಿಕೆ ಇದೆ ಎಂದರೆ ಸರಿ. ಘಟನೆ ನಡೆದಿದೆ ಎನ್ನುವ ಸಮಯದಲ್ಲಿ ಮೆಕಾನಿಕಗಳಾದ ಡಿಜಿ ನಾಯ್ಕ, ಜಿ.ಎಮ್ ಪೈ ರವರು ಹತ್ತಿರದಲ್ಲಿದ್ದರು. ಆ ಸಮಯದಲ್ಲಿ ಬೈ ಬೇಡ ಎಂದು ಸದರಿ ಮೆಕಾನಿಕಗಳು ಆರೋಪಿಗೆ ಹೇಳಿದ್ದರಾ ಎಂದರೆ ಸಾಕ್ಷಿ ಆ ತರಹ ಮಾತನಾಡಬಾರದು ಎಂದು ಆರೋಪಿಗೆ ಹೇಳಿದ್ದರು ಎಂದು ಹೇಳುತ್ತಾರೆ. ಸದರಿ ವಿಷಯ ನಾನು ಹೇಳಿಕೆ ನೀಡಿದ್ದೇನೆ ಎನ್ನುವ ಸಮಯದಲ್ಲಿ ನನಗೆ ಸಂಪೂರ್ಣ ಮಾಹಿತಿ ಇತ್ತು ಎಂದರೆ ಸರಿ. ಪೊಲೀಸರಿಗೆ ಹೇಳಿಕೆಯನ್ನು ಅಂದಾಜು ಅರ್ಧ ಗಂಟೆಯವರೆಗೆ ನೀಡಿದ್ದೇನೆ.

ಪಂಚನಾಮೆಯನ್ನು ಅಂದಾಜು 10–15 ನಿಮಿಷಗಳಲ್ಲಿ ಮಾಡಿದ್ದಾರೆ. ಪಂಚನಾಮೆಯನ್ನು ಹೀಗೆಯೇ ಬರೆಯಬೇಕೆಂದು ನಾನು ಹೇಳಿಲ್ಲ. ಪಂಚನಾಮೆಯನ್ನು ಪೊಲೀಸರೇ ಬರೆದಿರುತ್ತಾರೆ. ನಾನು ಕೆಲಸ ಮಾಡುವ ಸ್ಥಳ ಅಂದಾಜು 60x40 ಅಳತೆಯಲ್ಲಿದೆ. ಸದರಿ ಸ್ಥಳದ ಬಳಿ ಬಸ್ಸುಗಳನ್ನು ನಿಲ್ಲಿಸಲಾಗುತ್ತದೆ ಎಂದರೆ ಸರಿ. ಘಟನೆ ನಡೆದಿದೆ ಎನ್ನಲಾದ ಸಮಯದಲ್ಲಿ ಎಷ್ಟು ಬಸ್ಸುಗಳು ನಿಂತಿದ್ದವು ಎಂದರೆ 3–4 ಬಸ್ಸುಗಳು ಇರಬಹುದು ಎಂದು ಹೇಳುತ್ತಾರೆ. ಓಪನ್ ವರ್ಕಶಾಪ್ ಇದ್ದು ಪೂರ್ವ ಮತ್ತು ಪಶ್ಚಿಮದಿಂದ ಒಳಗಡೆ ಹೋಗಬಹುದು. ಘಟನೆ ನಡೆದಿದೆ ಎನ್ನುವ ಸಮಯದಲ್ಲಿ ಮಾಲಾ ನಾಯಕ ಎಂಬುವವರು ಸ್ಥಳಕ್ಕೆ ಧಾವಿಸಿದ್ದರು. ಆರೋಪಿಗೆ ಸ್ಥಳದಿಂದ ಹೊರಹಾಕಲು ಸ್ಥಳಕ್ಕೆ ಧಾವಿಸಿದ ಸಿಬ್ಬಂದಿ ಹಾಗೂ ನಾನು ಪ್ರಯತ್ನಿಸಿದ್ದೇನೆ ಎಂದರೆ ಸರಿ. ಆ ಸಮಯದಲ್ಲಿ ಆರೋಪಿ ನಾನು ಹೋರಹೋಗುವುದಿಲ್ಲ ಎಂದು ಮಂಡುತನ ಪ್ರದರ್ಶಿಸಿಲ್ಲ. ಆ ಸಮಯದಲ್ಲಿ ಸಿಟ್ಟಿನಿಂದ ಬೈದಾಡಿದ್ದನಾ ಎಂದರೆ ಸಾಕ್ಷಿ ಹಾಗೆಯೇ ಹೊರಹೋಗಿದ್ದಾನೆ ಎಂದು ಹೇಳುತ್ತಾರೆ.

ಚಾಸಾ–1 ರವರ ವಿಭಾಗದಿಂದ ನಮ್ಮ ವಿಭಾಗ ಅಂದಾಜು 10 ಮೀ ದೂರದಲ್ಲಿದೆ. ಆ ದಿನ ಸ್ವಚ್ಛತಾ ಕಾರ್ಯಕ್ರಮಕ್ಕೆ ಬರುವಂತೆ ಡಿಪೋದ ಸಿಬ್ಬಂದಿಗಳಿಗೆ ಪೂರ್ವಭಾವಿ ನೋಟಿಸು ಜಾರಿ ಮಾಡಿರಲಿಲ್ಲ. ಸ್ವಚ್ಛತಾ ಕುರಿತಂತೆ ನೋಟಿಸು ಜಾರಿ ಮಾಡಿದಾಗ ಹೋಗಬೇಕಾಗುತ್ತದೆ ಎಂದರೆ ಸರಿ. ಡಿಪೋದ ಸಿಬ್ಬಂದಿಗಳೆಲ್ಲ ಸ್ವಚ್ಛತಾ ಕಾರ್ಯಕ್ರಮಕ್ಕೆ ಹೋದರೆ ಡಿಪೋ ಬಂದ ಮಾಡಬೇಕಾಗುತ್ತದೆ ಎಂದರೆ ಸರಿ, ಆದರೆ

ಎಲ್ಲರೂ ಒಂದೇ ಸಾರಿ ಹೋಗುವುದಿಲ್ಲ, ಅವಧಿ ನಿಗಧಿಪಡಿಸಿಕೊಂಡು ಹೋಗಲಾಗುತ್ತದೆ ಎಂದು ಹೇಳುತ್ತಾರೆ.

ಆ ದಿನ ಡಿಪೋದ ಸೂಪರವೈಸರ್ ಯಾರಿದ್ದರೆಂದು ನೆನಪಿಲ್ಲ. ಸೂಪರವೈಸರ್ ಎಲ್ಲ ವಿಭಾಗದ ಮೇಲ್ವಿಚಾರಣೆ ಮಾಡುತ್ತಾರೆಂದರೆ ಸರಿ. ಘಟನೆ ಕುರಿತು ತಕ್ಷಣ ಸೂಪರವೈಸರಿಗೆ ಮಾಹಿತಿ ನೀಡಿದ್ದೇನೆ. ಸಾಕ್ಷಿ ಮುಂದುವರೆದು ಘಟನೆ ಕುರಿತು ಮೊದಲು ಚಾಸಾ-1 ರವರಿಗೆ ಮಾಹಿತಿ ನೀಡಲಾಗಿದೆ, ನಂತರ ಸೂಪರವೈಸರಿಗೆ ತಿಳಿಸಲಾಗಿದೆ ಎಂದು ಹೇಳುತ್ತಾರೆ. ಘಟನೆ ಕುರಿತು ಚಾಸಾ-1 ರವರಿಗೆ ಮಾಹಿತಿ ನೀಡಿದಾಗ ಬೆಳಿಗ್ಗೆ 9.35 ರಿಂದ 9.40 ಗಂಟೆ ಆಗಿರಬಹುದು. ಅದೇ ಸಮಯದಲ್ಲಿ ಚಾಸಾ-7 ರವರೂ ಸಹ ಆರೋಪಿತನಿಂದ ತನಗಾದ ತೊಂದರೆಯನ್ನು ನಾನಿದ್ದ ಸ್ಥಳಕ್ಕೆ ಬಂದು ತಿಳಿಸಿರುತ್ತಾನೆ. ಘಟನೆ ನಡೆದಿದೆ ಎನ್ನುವ ದಿವಸ ರಜೆ ಪಡೆದು ಮನೆಗೆ ಹೋಗಿಲ್ಲ. ಘಟನೆಯಿಂದ ಕೆಲಸಕ್ಕೆ ತೊಂದರೆ ಉಂಟಾಗಿಲ್ಲ ಎಂದರೆ ಸಾಕ್ಷಿ ಮಾನಸಿಕವಾಗಿ ಬೇಸರ ಅನುಭವಿಸಿದ್ದೇನೆ ಎಂದು ಹೇಳುತ್ತಾರೆ. ಮಾನಸಿಕ ಬೇಸರವಾದ ಕುರಿತು ವ, ಖಿನ್ನತೆಗೆ ಒಳಗಾದ ಬಗ್ಗೆ ವೈದ್ಯರ ಬಳಿ ಹೋಗಿಲ್ಲ. ನನಗಾದ ಮಾನಸಿಕ ತೊಂದರೆ ಕುರಿತಾಗಿ ನನ್ನ ಹೇಳಿಕೆಯಲ್ಲಿ ಬರೆಸಿಲ್ಲ ಎಂದರೆ ಸರಿ. ಆರೋಪಿ ಬೈದಾಗ ಯಾರು ಯಾರು ಹಾಜರಿದ್ದರು ಎಂದು ಬರೆಸಿಲ್ಲ ಎಂದರೆ ಸರಿ.

ಘಟನೆ ನಡೆದಿದೆ ಎನ್ನುವ ಸಮಯದಲ್ಲಿ ಅಂಕೋಲಾದಲ್ಲಿ ಮೊದಲಿನ ಬಸ್ ಸ್ಟ್ಯಾಂಡ್ ಇತ್ತು ಎಂದರೆ ಸರಿ. ಮೊದಲಿನ ಬಸ್ ಸ್ಟ್ಯಾಂಡ್ ಕಂಟ್ರೋಲರ್ ಕಟ್ಟಡ ಬಸ್

ನಿಲ್ದಾಣದ ಮಧ್ಯಭಾಗದಲ್ಲಿತ್ತು ಎಂದರೆ ಸರಿ. ಕಂಟ್ರೋಲರ್ ಕೊಠಡಿಯು ಪೂರ್ವಕ್ಕೆ ಮುಖ ಮಾಡಿತ್ತು ಎಂದರೆ ಸರಿ. ಪಶ್ಚಿಮಕ್ಕೆ ಜೈ ಹಿಂದ್ ಗ್ರೌಂಡ್ ಮತ್ತು ಕಟ್ಟಡ ಇರುತ್ತವೆ ಎಂದರೆ ಸರಿ. ಉತ್ತರಕ್ಕೆ ಶೌಚಾಲಯ ಇತ್ತು ಎಂದರೆ ಸರಿ. ಜೈ ಹಿಂದ್ ಹೈಸ್ಕೂಲ್ ಗ್ರೌಂಡ್ ಕಂಪೌಂಡಿಗೆ ತಾಗಿ ಇಲಾಖೆಯ ಬೋರವೆಲ್ ಇದೆ ಎಂದರೆ ಸರಿ.

ಡಿಸೇಲ್ ನ್ನು ಬಸ್ಸಿಗೆ ತುಂಬಿಸುವಾಗ ಆಗುತ್ತಿರುವ ಅವ್ಯವಹಾರದ ಕುರಿತು ಯೂನಿಯನ್ ಮುಖಂಡರಿಗೆ ಚಾಲಕ ಮತ್ತು ನಿರ್ವಾಹಕರು ಮಾತನಾಡಿದ ಬಗ್ಗೆ ವಿಷಯ ನನ್ನ ಮುಂದೆ ಪ್ರಸ್ತಾಪಿಸಿದ್ದರು ಎಂದರೆ ಸರಿಯಲ್ಲ. ಶಿವಕುಮಾರ ನಾಯ್ಕ ಆರೋಪಿ ಊರಿನವನಿದ್ದು, ಆತನೂ ಸಹ ಬಸ್ಸಿನ ಚಾಲಕನಿದ್ದ ಎಂದರೆ ಸರಿ. ಶಿವಕುಮಾರ ನಾಯ್ಕನ ಮೇಲೆಯೂ  ಸಹ ಇಲಾಖಾ ದುರ್ವತನೆ ಕುರಿತು ವರದಿಯಾಗಿತ್ತು ಎಂದರೆ ಆಗಿತ್ತು, ಆದರೆ ಅದರಲ್ಲಿ ನನಗೆ ಯಾವ ತೊಂದರೆ ಆಗಿಲ್ಲ ಎಂದು ಹೇಳುತ್ತಾರೆ. ಶಿವಕುಮಾರ ನಾಯ್ಕನ ಪ್ರಕರಣದಲ್ಲಿಯೂ ಸಹ ಚಾಸಾ–1 ಘಟಕ ವ್ಯವಸ್ಥಾಪಕರಿದ್ದರು ಎಂದರೆ ಸರಿ.  ಶಿವಕುಮಾರ ನಾಯ್ಕನ ಪ್ರಕರಣದಲ್ಲಿ ಚಾಲಕರು ಮತ್ತು ನಿರ್ವಾಹಕರು ಚಾಸಾ–1 ರವರ ವಿರುದ್ಧ ಪ್ರತಿಭಟನೆಗಿಳಿದಾಗ ಆರೋಪಿ ಚಾಸಾ–1 ರವರಿಗೆ ಸಹಕರಿಸಲಿಲ್ಲ ಎಂದರೆ ಮಾಹಿತಿ ಇಲ್ಲ. ಆ ಸಮಯದಲ್ಲಿ ಯೂನಿಯನ್ ಮುಖ್ಯಸ್ಥರು ಸಮಸ್ಯೆಯನ್ನು ಬಗೆಹರಿಸಿರುತ್ತಾರೆಂದರೆ ಮಾಹಿತಿ ಇಲ್ಲ.

ಆರೋಪಿ ಕುರಿತಾಗಿ ಕರ್ತವ್ಯ ತಡೆ ಆದೇಶದ ಪ್ರತಿಯನ್ನು ನಾನು ನೋಡಿದ್ದೇನೆ. ಆರೋಪಿ ಕರ್ತವ್ಯ ತಡೆ ಆದೇಶ ನೋಡಿದ ನಂತರ ಸಿಟ್ಟಾಗಿರುತ್ತಾನೆ. ಕಾರಣ ಕೇಳಿ

ನೀಡುವ ನೋಟಿಸಿಗೆ ಉತ್ತರ ನೀಡಬೇಕಾಗುತ್ತದೆ ಹೊರತು ಕೂಡಲೇ ಅದರ ಮೇಲೆ ಕ್ರಮ ಕೈಗೊಳ್ಳಲು ಬರುವುದಿಲ್ಲ ಎಂದರೆ ಸರಿ. ಕಾರಣ ಕೇಳಿ ನೀಡುವ ನೋಟಿಸಿನ ನಂತರ ಇಲಾಖಾ ವಿಚಾರಣೆ ಮಾಡುವುದಿದ್ದರೆ ಆ ಕುರಿತು ತಿಳಿಸುತ್ತಾರೆ ಎಂದರೆ ಸರಿ. ಇಲಾಖಾ ವಿಚಾರಣೆಯಾದ ನಂತರ ಸಂಬಂಧಪಟ್ಟವರಿಗೆ ಕರ್ತವ್ಯ ತಡೆ ಆದೇಶ ಹೊರಡಿಸಲಾಗುತ್ತದೆ ಎಂದರೆ ಸರಿ. ಕರ್ತವ್ಯ ತಡೆ ಆದೇಶವನ್ನು ಬೆಳಿಗ್ಗೆ 9.00 ಗಂಟೆಗೆ ಆಡಳಿತಾಧಿಕಾರಿ ನನಗೆ ತೋರಿಸಿದ್ದರು. ಆರೋಪಿ ಆ ದಿನ ಮನೆಯಿಂದ ಡಿಪೋಗೆ ಬಂದಿದ್ದ. ಆರೋಪಿಗೆ 8 ರಿಂದ 10 ದಿನಗಳ ಹಿಂದೆ  ಡ್ಯೂಟಿಯಿಂದ ತೆಗೆದುಹಾಕಲಾಗಿತ್ತು. ಚಾಸಾ-1 ರವರು ಆರೋಪಿಗೆ ಡ್ಯೂಟಿ ಹಚ್ಚುವುದನ್ನು ನಿಲ್ಲಿಸಿದ್ದರು. ಚಾಸಾ-1 ರವರಿಗೆ ಡಿವಿಜನ್ ಕಚೇರಿಯಿಂದ ಬಂದ ಆದೇಶದ ಮೇರೆಗೆ ಡ್ಯೂಟಿಯಿಂದ ಆರೋಪಿಯನ್ನು ತೆಗೆದಿದ್ದರು. 8-10 ದಿನಗಳ ಹಿಂದೆ ಆರೋಪಿ ಡ್ಯೂಟಿ ನಿಲ್ಲಿಸಿದ ತಕ್ಷಣ ನನ್ನ ಬಳಿ ಬಂದಿಲ್ಲ. ಡ್ಯೂಟಿ ನೇಮಿಸುವ ಅಧಿಕಾರಿ ಆರೋಪಿಗೆ ಡ್ಯೂಟಿ ನೀಡಿರುವುದಿಲ್ಲವೆಂದು ನನಗೆ ಹೇಳಿದ್ದ. ಆದೇಶದ ಪ್ರತಿ ಸಂಬಂಧಪಟ್ಟ ನೌಕರನಿಗೆ ಮತ್ತು ಇಲಾಖಾ ಮುಖ್ಯಸ್ಥರಿಗೆ ಒಂದು ಪ್ರತಿ ಬರುತ್ತದೆ ಎಂದರೆ ಸರಿ. ಆರೋಪಿಗೆ ಯಾವುದೇ ಕರ್ತವ್ಯ ತಡೆ ಆದೇಶ ಬಂದಿರಲಿಲ್ಲ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಹಾಗೂ ಚಾಸಾ-6 ಮತ್ತು 7 ರವರು ಚಾಸಾ-1 ರವರ ಜೊತೆ ಸೇರಿ ಡಿಸೇಲ್ ಅವ್ಯವಹಾರ ಗೊತ್ತಾಗುತ್ತದೆ ಮತ್ತು ಶಿವಕುಮಾರ ನಾಯ್ಕನ ಪ್ರಕರಣದ ಕುರಿತಾಗಿ ಎಲ್ಲರನ್ನು ಹತ್ತಿಕ್ಕಲು ಆರೋಪಿಯನ್ನು ಗುರಿಯಾಗಿಸಿಕೊಂಡು ಸುಳ್ಳು ಪ್ರಕರಣ ಮಾಡಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೆಕಾನಿಕಲ್ ಸೆಕ್ಷನ್ ನಲ್ಲಿ

ಡಿಸೇಲ್ ಅವ್ಯವಹಾರವನ್ನು ಆರೋಪಿ ಯೂನಿಯನ್ ಮುಖಂಡರಿಗೆ ತಿಳಿಸುತ್ತಿದ್ದಾನೆಂದು ಮತ್ತು ಡಿಸೇಲ್ ಅವ್ಯವಹಾರದ ಕುರಿತು ಎಲ್ಲರಿಗೂ ಗೊತ್ತಾಗುತ್ತದೆ ಎಂದು ತಿಳಿದು ಆರೋಪಿ ಮೇಲೆ ಸುಳ್ಳು ಆರೋಪ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಬಸ್ ರಿಪೇರಿ ಮಾಡಿದ್ದಕ್ಕಾಗಿ ಪ್ರತ್ಯೇಕ ಹಣ ಬರುವುದಿಲ್ಲ. ಬಸ್ಸಿನ ಬಿಡಿಭಾಗ ಅಳವಡಿಸಿದ ಬಗ್ಗೆ ಪರಿಶೀಲಿಸಲು ಪ್ರತ್ಯೇಕ ವಿಭಾಗವಿದೆ. ಬಿಡಿಭಾಗಗಳನ್ನು ಖಾಸಗಿ ರೀತಿಯಲ್ಲಿ ಮಾರಾಟ ಮಾಡಲಾಗುತ್ತದೆ ಎಂದು ಆರೋಪಿಗೆ ಗೊತ್ತಾದ ನಂತರ ಯೂನಿಯನ್ ಲೀಡರ್ ಗೆ ತಿಳಿಸುತ್ತಿದ್ದ ಅದರಿಂದ ಪ್ರತಿಭಟನೆಯಾಗುತ್ತಿತ್ತು ಎಂದರೆ ಸರಿಯಲ್ಲ. ತಾಂತ್ರಿಕ ದೋಷವನ್ನು ಸರಿಪಡಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆರೋಪಿ ನಿಡಿ-1 ನ್ನು ತಾನೇ ಬರೆದುಕೊಂಡು ಬಂದಿದ್ದಾನೆ, ಅದರಲ್ಲಿ ಯಾವುದೇ ವಾಹನದ ಸಂಖ್ಯೆ ಇರುವುದಿಲ್ಲ ಎಂದು ಹೇಳುತ್ತಾರೆ. ಲಾಗ್ ಶೀಟ್ ಕಳೆದುಹೋದರೆ ಆ ಕುರಿತು ನಮೂದಿಸುತ್ತೇವೆ ಎಂದರೆ ಸರಿ. ಒಂದು ಗಾಡಿ ಜೊತೆ ಒಂದೇ ಲಾಗಶೀಟ್ ಕಳುಹಿಸಲಾಗುತ್ತದೆ ಎಂದರೆ ಸರಿ. ಸದರಿ ಲಾಗಶೀಟ್ ಬಸ್ಸಿನ ರೂಟ್ ಮುಗಿದ ತಕ್ಷಣ ಪರತ್ ಪಡೆಯುತ್ತೇವೆ ಎಂದರೆ ಸರಿ. ಲಾಗಶೀಟಿನ ಮೇಲಿನ ಪ್ರತಿಯನ್ನು ಇಲಾಖೆಯವರು ಇಟ್ಟುಕೊಳ್ಳುತ್ತಾರೆ. ನಿಡಿ-1 ರಲ್ಲಿ ತಿಳಿಸಿದ ಯಾಂತ್ರಿಕ ದೋಷದ ಕುರಿತು ಇರುವ ಪ್ರತಿ ನಮ್ಮ ವಿಭಾಗಕ್ಕೆ ನೀಡುತ್ತಾರೆ. ನಿಡಿ-1 ರ ಪ್ರತಿಯನ್ನು ಬಸ್ಸಿನ ಚಾಲಕ ಇಟ್ಟುಕೊಳ್ಳಬೇಕಾಗುತ್ತದೆ, ಒಂದು ವೇಳೆ ಯಾಂತ್ರಿಕ ದೋಷ ಸರಿಪಡಿಸದಿದ್ದರೆ ಡಿಸಿ ರವರಿಗೆ ಸದರಿ ಪ್ರತಿ ಸಹಿತ ಪಿರ್ಯಾದಿ ಕೊಡಲು ಅವಕಾಶವಿದೆ ಎಂದರೆ ಸರಿಯಲ್ಲ. ಲಾಗಶೀಟ ನಲ್ಲಿ ಏನೇನು ಬರೆಯಲಾಗಿದೆ ಎಂದು ಪಡೆಯುವಾಗ ಪರಿಶೀಲಿಸುತ್ತೇವೆ ಎಂದರೆ ಸರಿ.

ಲಾಗಶೀಟನ್ನು ಸಿಬ್ಬಂದಿ ಪಡೆದು ಯಾಂತ್ರಿಕ ದೋಷದ ಕುರಿತು ಇರುವ ಪ್ರತಿಯನ್ನು ನನಗೆ ವರ್ಗಾಯಿಸುತ್ತಾರೆ. ನಿಡಿ-1 ರ ಪ್ರತಿಯನ್ನು ಬಸ್ಸಿನ ಚಾಲಕನಿಗೆ ನೀಡುತ್ತಿದ್ದು, ಅದನ್ನು ಈ ದಿನ ಆರೋಪಿ ಹಾಜರುಪಡಿಸಿದ್ದಾನೆಂದು ಅರಿತ ನಂತರ ಸದರಿ ಪ್ರತಿ ನನ್ನ ಬಳಿ ಇರುತ್ತದೆಯೆಂದು ಸುಳ್ಳು ಹೇಳುತ್ತಿರುವೆ ಎಂದರೆ ಸರಿಯಲ್ಲ. ನಿಡಿ-1 ರಂತಹ ಯಾಂತ್ರಿಕ ದೋಷದ ಪ್ರತಿ ವಿವರ ಇಲಾಖೆಯಲ್ಲಿ ಸೂಕ್ತವಾಗಿ ಇಡಲಾಗುತ್ತದೆ ಎಂದರೆ ಸರಿ. ವಾಹನ ಬಂದ ತಕ್ಷಣ ಲಾಗಶೀಟನಲ್ಲಿ ಏನಾದರೂ ತೊಂದರೆ ಬರದಿದ್ದರೆ ಅದೇ ದಿನ ಪರಿಶೀಲಿಸಲಾಗುತ್ತದೆ. ಆರೋಪಿ ತೆಗೆದುಕೊಂಡು ಹೋದ ಬಸ್ಸು ಬ್ರೇಕ್ ತಾಗುತ್ತಿರಲಿಲ್ಲ ಮತ್ತು ಏರ್ ಬ್ರೇಕ್ ಸಹ ಸರಿಯಾಗಿ ಹಿಡಿಯುತ್ತಿರಲಿಲ್ಲವೆಂದು ನಿಡಿ-1 ರಂತೆ ವರದಿ ಮಾಡಿದ್ದ ಎಂದರೆ ಸರಿಯಲ್ಲ. ಆರೋಪಿ ಹುದ್ದೆಗೆ ನೇಮಕವಾದಾಗ ಪ್ರಥಮ ಸ್ಥಾನದಲ್ಲಿದ್ದು, ಆತನ ಚಾಲನೆಯಲ್ಲಿ ನಿಖರತೆ ಮತ್ತು ಸ್ಪಷ್ಟತೆ ಇದ್ದು, ಡಿಪೋದಲ್ಲಿ ನಡೆಯುವ ಅವ್ಯವಹಾರದ ಕುರಿತು ಮುಖಂಡರಿಗೆ ತಿಳಿಸುತ್ತಾನೆಂಬ ವಿಚಾರದಲ್ಲಿ ಆತನಿಗೆ ತೊಂದರೆ ಕೊಡುತ್ತಿದ್ದೀರಿ ಎಂದರೆ ಸರಿಯಲ್ಲ. ಪೊಲೀಸರ ಮುಂದೆ ಹೇಳಿಕೆ ನೀಡಿಲ್ಲ, ಪಂಚನಾಮೆ ಮಾಡಿಲ್ಲ, ಆರೋಪಿ ಬೈದಿಲ್ಲ, ಪ್ರಕರಣದ ಪೂರಕವಾಗಿ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ಪೊಲೀಸರು ಸೃಷ್ಟಿಸಿದ ಪ್ರಕರಣಕ್ಕೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕರ್ತವ್ಯಕ್ಕೆ ತಡೆ ಆಗುವಂತೆ ಆರೋಪಿ ಯಾವುದೇ ರೀತಿ ದುರ್ವತನೆಯಿಂದ ನಡೆದುಕೊಂಡಿಲ್ಲ ಎಂದರೆ ಸರಿಯಲ್ಲ.

ಬಸ್ ಡಿಪೋಗೆ ತಾಗಿಕೊಂಡು ವಿನಾಯಕ ನಾಯ್ಕ ಎಂಬುವವರ ಚಹಾದ ಅಂಗಡಿ, ಆಗೇರ ಹಾಗೂ ಉಳಿದ ಜನರ ಮನೆಗಳಿವೆ ಎಂದರೆ ಸರಿ. ಕೆವಿನಾಯ್ಕ

ಪ್ರೊಫೆಸರ್ ರವರ ಮನೆ ಬಸ್ಸು ಡಿಪೋ ಮುಂಬದಿಯಲ್ಲಿದೆ ಎಂದರೆ ಸರಿ. ಪೊಲೀಸರು ಪಂಚನಾಮೆ ಸಮಯದಲ್ಲಿ ಡಿಪೋದ ಸುತ್ತಮುತ್ತಲಿರುವ ಹತ್ತಿರದ ರಹವಾಸಿಗಳನ್ನು ಕರೆಸಲು ಪ್ರಯತ್ನಿಸಿಲ್ಲ ಎಂದರೆ ಸರಿ.

<u>ಮರು ವಿಚಾರಣೆಃ</u> ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಜೆ.ಎಂ.ಎಫ್.ಸಿ., ಅಂಕೋಲಾ.